(viii) Holding of meetings, Conferences and Seminars on Adult Education.

(ix) Raising of funds by means of donations and endowments for furtherance of Adult Education.

(x) Promotion of folk-lore, folk Arts and folk dances.

(xi) Spreading knowledge through Audio Visual Aids.

(c) (i) Yes.

(ii) The constitution of the Council was amended by Government providing for nomination of the President and General Secretary. A Government Officer of the rank and status of a Deputy Director of Public Instruction has been appointed as the General Secretary of the Mysore State Adult Education Council to help the Council in its work and supervise its activities. A proposal to convert the Mysore State Adult Education Council into a Statutory Body is also under consideration.

(d) No. It is considered that the work should be carried out by an autonomous body rather than by a department of Government.

Disturbances at the Exhibition, Davangere

ಶ್ರೀ ವಾಟಾಳ್ ನಾಗರಾಜ್ (ಬೆಂಗಳೂರು–ಚಿಕ್ಕಪೇಟೆ).—ಅಧ್ಯಕ್ಷರೇ, ತಮಗೆ ಎರಡು ನೋಟೀಸ್‌ಗಳನ್ನು ಕಳುಹಿಸಿದ್ದೇನೆ. ಈಗತಾನೇ ಮಾನ್ಯ ಶ್ರೀ ಶಿವಾನಂದಸ್ವಾಮಿಯವರು ಟ್ರಂಕ್ ಕಾಲ್ ಮಾಡಿ ನನ್ನಲ್ಲಿ ಮಾತನಾಡಿದರು. ದಾವಣಗೆರೆಯಲ್ಲಿ ವಸ್ತುಪ್ರದರ್ಶನ ನಡೆಯುತ್ತಿದೆ. ನಿನ್ನೆ ದಿವಸ ಕಾಂಗ್ರೆಸ್ಸಿನವರು ಪುಂಡರನ್ನು ಬಿಟ್ಟು ಅಲ್ಲಿ ಅವರ ಅಣ್ಣನ ಮಗನಿಗೆ ಏಟು ಕೊಟ್ಟು ಹೊಡೆದಿದ್ದಾರೆ. ಅಲ್ಲಿರುವ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ ವೇಣುಗೋಪಾಲ್ ಎನ್ನುವವರನ್ನು ವರ್ಗ ಮಾಡಬೇಕೆಂದು ನೂರಾರು ಸಾರಿ ಹೇಳಿದ್ದರೂ, ಬೇಕೆಂದೇ ಅವರನ್ನು ಅಲ್ಲಿಯೇ ಇಟ್ಟುಕೊಂಡಿದ್ದಾರೆ. ಅವರನ್ನು ದಾವಣಗೆರೆಯಲ್ಲಿ ಕಾಂಗ್ರೆಸ್‌ನವರ ರಕ್ಷಣೆಗಾಗಿ ಇಟ್ಟುಕೊಂಡಿದ್ದಾರೆ. ನೀವು ಈಗ ಪ್ರೊಟೆಕ್ಷನ್ ಕೊಡದಿದ್ದರೆ, ನಾಳೆ ವಸ್ತುಪ್ರದರ್ಶನವನ್ನು ನಡೆಸುವುದಕ್ಕಾಗುವುದಿಲ್ಲವೆಂದು ಮಾನ್ಯ ಶ್ರೀ ಶಿವಾನಂದಸ್ವಾಮಿಯವರು ತಿಳಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗೆ ಒಂದು ಸರಿಯಾದ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು.—ನನಗೆ ಈ ನೋಟೀಸ್ ಬಂದು 10 ನಿಮಿಷಗಳು ಆಯಿತು. ಆ ನೋಟೀಸನ್ನು ನಾನು ಇನ್ನೂ ಓದಿಲ್ಲ. ನಾನು ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸುತ್ತೇನೆ. ಅವರು ಏನು ಮಾಡುತ್ತಾರೆಂಬ ಬಗ್ಗೆ ತಕ್ಕ ಮಾಹಿತಿಯನ್ನು ಈ ಸಭೆಯಲ್ಲಿ ನೀಡುತ್ತಾರೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ತಮ್ಮ ಕೈಗೆ ಅದು ಈಗ ಬಂತು ಎಂದು ಹೇಳುತ್ತೀರಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸಮಾಚಾರ ಮೊದಲೇ ಗೊತ್ತಿತ್ತೋ ಇಲ್ಲವೋ ಎಂಬುದನ್ನು ಅವರು ಇಲ್ಲಿ ಹೇಳಬೇಕು.

Sri H. SIDDAVEERAPPA (Harihara).—Let the Hon. Chief Minister make a statement during the course of the day.

Mr. SPEAKER.—I shall pass on this notice. I know the concern of the hon. Members.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಅರ್ಜೆಂಟ್. ಈಗಲೇ ಕಾರ್ಯಮಾಡದಿದ್ದರೆ ಅಲ್ಲಿ ಅಧ್ಯಕ್ಷರ ಮೇಲೆ ಕೈ ಮಾಡಬೇಕೆಂದು ಕಾದಿದ್ದಾರೆ. ಅಲ್ಲಿ ಪೋಲೀಸಿನವರ ರಕ್ಷಣೆ ಇಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಅದನ್ನು ಕೊಡುತ್ತೇನೆ ಅವರು ಅದರ ಬಗ್ಗೆ ಮಾಹಿತಿ ಪಡೆದು ಏನು ಹೇಳುತ್ತಾರೋ ನೋಡೋಣ.

ಶ್ರೀ ಎಸ್. ಚನ್ನಯ್ಯ.—ಅವರ ಕೈಯಿಂದ ಯಾವಾಗ ಉತ್ತರ ಹೇಳಿಸುತ್ತೀರಿ ? ಒಂದು ಗಂಟೆ ಆದಮೇಲೆ ಉತ್ತರ ಹೇಳಲಿ.

Election of the Town Municipal Council Harihara

† ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಅದೇನೆಂದರೆ, ಮೊನ್ನೆತಾನೇ ಹರಿಹರ ನಗರ ಮುನಿಸಿಪಲ್ ಚುನಾವಣೆ ಸಂಬಂಧ ಒಂದು ವಿಷಯ ಇಲ್ಲಿ ಚರ್ಚೆಗೆ ಬಂತು. ಅದರ ವಿಚಾರವಾಗಿ ಹೈಕೋರ್ಟಿನಲ್ಲಿ ಈ ದಿವಸ ಮತ್ತೊಂದು ಕೇಸನ್ನು ಹಾಕಿದ್ದಾರೆ. ಅದರ ಬಗ್ಗೆ ಈಗ ಮಾತನಾಡುವುದಿಲ್ಲ. ಆದರೆ ಪ್ರಸ್ತುತ ಮಾತನಾಡಬೇಕೆಂದಿರುವುದೇನೆಂದರೆ, ನಾಮಿನೇಷನ್ ಪೇಪರ್ ಸ್ಕ್ರುಟಿನಿ ದಿವಸ ಹರಿಹರ ನಗರ ಮುನಿಸಿಪಲ್ ಆಫೀಸಿನಲ್ಲಿ, ಎರಡು ರಿಜರ್ವ್ ಪೋಲೀಸ್ ವ್ಯಾನುಗಳನ್ನು ಅಲ್ಲಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರ್ ತೆಗೆದುಕೊಂಡು ಹೋಗಿ, ಅಲ್ಲಿ ದಾಳಿ ಮಾಡುವ ಅವಶ್ಯಕತೆ ಇತ್ತೇ ? ಅವರಿಗೆ ರಿಕ್ವಿಸಿಷನ್ ಕೊಟ್ಟಿತ್ತೇ ? ಅಲ್ಲಿಗೆ ಎದರುಗಡೆ ಪಾರ್ಟಿಯ ಒಬ್ಬ ಕ್ಯಾಂಡಿಡೇಟ್ ಏನಹ ಇನ್ನೊಬ್ಬರು ಹೋಗದೇ ಇರಬೇಕಾದರೆ, ಅಲ್ಲಿಗೆ ಎರಡು ಪೋಲೀಸ್ ವ್ಯಾನುಗಳನ್ನು ತೆಗೆದುಕೊಂಡು ಹೋಗುವ ಅವಶ್ಯಕತೆ ಏನಿತ್ತು ? ಇದರ ಬಗ್ಗೆ ಎರ್ಲಾ ವಿವರಗಳನ್ನು ಅಲ್ಲಿಂದ ತರಿಸಿಕೊಂಡು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇವತ್ತು ಹೇಳಲಿ ಅಥವಾ ನಾಳೆಯೇ ಹೇಳಲಿ. ದೇಶದ ಹಿತದೃಷ್ಟಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕ ರಾ ಅಂಡ್ ಆರ್ಡರ್ ಪೊಜಿಷನ್ ದಿನೇದಿನೇ ಈ ರೀತಿ ಆಗುತ್ತಿರುವಾಗ, ದಯವಿಟ್ಟು ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಂಡು ಸಂಬಂಧ ಪಟ್ಟವರನ್ನು ಅಲ್ಲಿಂದ ವರ್ಗಾವಣೆ ಮಾಡದಿದ್ದರೆ ಜನರಿಗೆ ಬಹಳ ಹಿಂಸೆಯಾಗುತ್ತದೆ. ಅದು ನನ್ನ ವೈಯಕ್ತಿಕ ದೃಷ್ಟಿಯಿಂದ ಮುಖ್ಯವಲ್ಲ. ಅಲ್ಲಿ ಬಹಳ ಜನರು ಹಾಹಾಕಾರದಲ್ಲಿದ್ದಾರೆ. ಆದ್ದರಿಂದ ಅದನ್ನು ತಾವು ವಿಚಾರಮಾಡಬೇಕು.

Comments on the Opposition Parties by a Newspaper

Sri B. P. GANGADHAR (Tumkur).—We have sent a notice for privilege motion in connection with what appeared in a local newspaper of Bangalore. It was not really a decent thing. Seventeen to eighteen of the members have signed that notice, and it was submitted about three or four days back. It is a very serious matter. The newspapers cannot play as they like. Whatever we do here we do in the best interest of the ryots. It may be in the interest of a particular paper to canvass for Government. We have to take stern action against that newspaper. I want to know what has happened to that notice.

ಶ್ರೀ ಅಜೀಜ್ ಸೇಠ್ (ನರಸಿಂಹರಾಜ).—ನಾವು 20-27 ಜನ ರುಜು ಮಾಡಿ, ಒಂದು ಪ್ರಿವಿಲೆಜ್ ಮೋಷನ್ ಕಳಿಸಿದ್ದೇವೆ. ಅದರಲ್ಲಿ ವಿರೋಧಪಕ್ಷಕ್ಕೆ ಬೇಕಾದಷ್ಟು ಟೀಕಿಸಿದ್ದಾರೆ. ಅದರ ವಿಚಾರ ತಾವು ಏನಾದರೂ ಹೇಳುತ್ತೀರಿ ಎಂದು ನಾವು ಸುಮ್ಮನೆ ಕೂತಿದ್ದೇವೆ. ಆ ವಿಷಯ ಏನಾಯಿತು ಎಂದು ಗೊತ್ತಿಲ್ಲ. ಇದು ನಮಗೆ ಬಹಳ ಸೀರಿಯಸ್ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಇದೇ ವಿಷಯದಲ್ಲಿ, ಪ್ರಜಾವಾಣಿಯ ಬಗ್ಗೆ ನಾವು 30 ಜನ ಸದಸ್ಯರು ಬರೆದು ಕೊಟ್ಟಿದ್ದೇವೆ. ಅದರ ಬಗ್ಗೆ ಹೇಳಿದ್ದೇವೆ. ಅದಕ್ಕೆ ಸ್ಪೀಕರ್